# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.232-2021** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಕಂಠ ಶೆಟ್ಟಿ |
| ತಂದೆಯ/ಗಂಡನ ಹೆಸರು | ಲೇ.ಹನುಮ ಶೆಟ್ಟಿ |
| ವಯಸ್ಸು | 64 ವರ್ಷ |
| ಉದ್ಯೋಗ | ನಿವೃತ್ತ ಸರ್ಕಾರಿ ನೌಕರ |
| ವಾಸ್ತವ್ಯ | ಹಗಿನವಾಳು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 25-08-2022.** |

**ಮುಖ್ಯ ವಿಚಾರಣೆಃ   ವಾದಿ ಪರ ವಕೀಲರಾದ ಶ್ರೀ ಎಂ.ಸಿ.ಎಸ್ ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ  ಎಲ್ಲಾ ವಿಷಯಗಳು ಸತ್ಯವಾಗಿದ್ದು  ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

ದಿ.25-01-2021 ಉಪ-ವಿಭಾಗಾಧಿಕಾರಿ, ಮೈಸೂರು ಉಪ-ವಿಭಾಗ ಮೈಸೂರು, ರವರು ಮಾಹಿತಿ ಹಕ್ಕು ಅಧಿನಿಯಮ-2005 ರಡಿ ಮಾಹಿತಿ ಕೋರಿರುವ ಬಗ್ಗೆ  ನೀಡಿರುವ ತಿಳುವಳಿಕೆ ಪತ್ರ ಮತ್ತು ದಾಖಲೆಯನ್ನು ಹಾಜರುಪಡಿಸಿದ್ದು ನಿಪಿ-1 ಎಂದು, ದಿ.29-03-1973 ರ ಶುದ್ಧ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ-2 ಎಂದು, ಕಂದಾಯದ ರಶೀದಿಗಳನ್ನು ಹಾಜರುಪಡಿಸಿದ್ದು ನಿಪಿ-3 ರಿಂದ 5 ಎಂದು, ದಿ.05-03-2021 ರಂದು ಉಪ-ತಹಶೀಲ್ದಾರ್, ನಾಡಕಚೇರಿ ಹುಲ್ಲಹಳ್ಳಿ  ಹೋಬಳಿ ರವರು ನೀಡಿರುವ ಹಿಂಬರಹವನ್ನು  ಹಾಜರುಪಡಿಸಿದ್ದು ನಿಪಿ-6 ಎಂದು, ದಿ.05-02-2021 ರಂದು ಉಪ-ತಹಶೀಲ್ದಾರ್,  ನಾಡಕಚೇರಿ ಹುಲ್ಲಹಳ್ಳಿ ಹೋಬಳಿ ರವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿದ್ದು ನಿಪಿ-7 ಎಂದು, ಪಹಣಿ ಪತ್ರಿಕೆಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು

ನಿಪಿ–8 ರಿಂದ 11 ಎಂದು, ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ನಿಪಿ–12 ರಿಂದ 24 ಎಂದು ಗುರುತಿಸಲಾಯಿತು.

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**